ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ವಿ.ಸ.ಪ 01/ವಿ.ಮಂ.ಅ: 03:2016-17

ದಿನಾಂಕ: 01-02-2018

## : ಸುತ್ತೋಲೆ :

**ವಿಷಯ**: ದಿನಾಂಕ: 05-02-2018 ರಿಂದ 28-02-2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದ ಸಮಯದಲ್ಲಿ ಬರುವ ಪ್ರಶ್ನೆಗಳಿಗೆ ನಿಗದಿತ ಅವಧಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

********

- ಕರ್ನಾಟಕ ವಿಧಾನ ಮಂಡಲದ ಅಧಿವೇಶನ ದಿನಾಂಕ: 05-02-2018 ರಿಂದ 28-02-2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.
- ಶ್ರೀ ಹೆಚ್.ಮಂಜುನಾಥ್, ಸಹಾಯಕ ನಿರ್ದೇಶಕರು, ವಿ.ಸ/ವಿ.ಪ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರನ್ನು ವಿಧಾನ ಸಭೆ / ಪರಿಷತ್ತಿನ ಸಂಪರ್ಕಾಧಿಕಾರಿಯನ್ನಾಗಿ ನೇಮಿಸಿದೆ. ಇವರು ದಿನನಿತ್ಯ ಕಾರ್ಯ ಕಲಾಪಗಳನ್ನು ತರಿಸಿ ಅದಕ್ಕೆ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸಿ ಸಭೆಯ ಕಾರ್ಯಕಲಾಪಗಳ ಬಗ್ಗೆ ಆಯುಕ್ತರಿಗೆ ವರದಿ ಮಾಡಲು ಸೂಚಿಸಿದೆ. **ಇವರ ದೂರವಾಣಿ ಸಂಖ್ಯೆ: 080-22112519 ಇ-ಮೇಲ್ ಐಡಿ-** adpilalccpi@gmail.com
- ಪ್ರತಿ ಬುಧವಾರ ಮತ್ತು ಶುಕ್ರವಾರ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳು ಕ್ರಮವಾಗಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಬರುತ್ತವೆ. ಇದಕ್ಕೆ ಎರಡು ದಿನಗಳ ಮೊದಲೇ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸುವುದು ಅತ್ಯಾವಶ್ಯಕವಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.
- ಈ ದಿಶೆಯಲ್ಲಿ ಪ್ರತಿ ದಿನ ಬರುವ ಚುಕ್ಕೆ ಗುರುತಿನ ಪ್ರಶ್ನೆಗಳು, ಚುಕ್ಕೆ ರಹಿತ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಶೂನ್ಯ ವೇಳೆ ಪ್ರಸ್ತಾಪಗಳು, ವಿವಿಧ ನಿಯಮಗಳ ಅಡಿಯಲ್ಲಿ ಕೇಳಲಾಗುವ ಪ್ರಶ್ನೆಗಳನ್ನು ಸಂಬಂಧಿಸಿದವರು ನಿರಾಕರಿಸದೇ ಕೂಡಲೇ ಸ್ವೀಕರಿಸುವುದು. ಒಂದು ವೇಳೆ ನಿರಾಕರಿಸಿದಲ್ಲಿ ಕಡ್ಡಾಯವಾಗಿ ಸಕಾರಣವನ್ನು ಲಿಖಿತ ಮೂಲಕ ದಾಖಲಿಸಿ ಹಿಂದಿರುಗಿಸುವುದು.
- ವಿಧಾನ ಸಭೆ/ಪರಿಷತ್ತಿನ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು ಇತ್ಯಾದಿ ಬಂದ ತಕ್ಷಣ ಉತ್ತರಗಳನ್ನು ಆಯಾ ದಿನವೇ ಕಳುಹಿಸಿಕೊಡಲು ತಿಳಿಸಿದೆ.
- ಅಪರ ಆಯುಕ್ತರ ಕಛೇರಿ, ಧಾರವಾಡ/ಕಲ್ಬುರ್ಗಿ ಈ ಕಛೇರಿ ವ್ಯಾಪ್ತಿಗೆ ಮಾತ್ರ ಅನ್ವಯಿಸುವ ಪ್ರಶ್ನೆಗಳಿಗೆ ಸಂಬಂಧಿಸಿದವರು ಉತ್ತರಗಳನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ adpilalccpi@gmail.com ಗೆ ದೃಢೀಕೃತ ಪ್ರತಿಯನ್ನು ಕಳುಹಿಸಲು ತಿಳಿಸಿದೆ.
- ವಿಧಾನ ಸಭೆ / ಪರಿಷತ್ ಕಾರ್ಯಕಲಾಪ ನಡೆಯುವ ವೇಳೆಯಲ್ಲಿ ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಸಂಬಂಧಿಸಿದ ಅಧೀಕ್ಷಕರುಗಳು ಮತ್ತು ನೌಕರರು ಕಛೇರಿ ಅವಧಿಯ ನಂತರವೂ ಕಛೇರಿಯಲ್ಲಿ ಕಡ್ಡಾಯವಾಗಿ ಇರತಕ್ಕದ್ದು. ಸಂಬಂಧಿಸಿದ ಶಾಖೆಗಳಲ್ಲಿ ಒಬ್ಬ ಪ್ರಥಮ ದರ್ಜೆ ಸಹಾಯಕರನ್ನು ರಾತ್ರಿ 8.00 ರ ವರೆಗೆ ಇರಲು ಸೂಚಿಸಿದೆ. ಮರು ದಿನದ ಕಾರ್ಯಕಲಾಪಗಳ ಪಟ್ಟಿ ಬಂದನಂತರ ಮಾತ್ರ ಸಂಬಂಧಪಟ್ಟ ಸಿಬ್ಬಂದಿಗಳು ಸಹಾಯಕ ನಿರ್ದೇಶಕರು [ವಿ.ಸ/ವಿ.ಪ] ರವರ ಅನುಮತಿ ಪಡೆದು ಕಛೇರಿಯನ್ನು ಬಿಡಲು ಸೂಚಿಸಿದೆ.
- ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಬರುವ ಎಲ್ಲಾ ಪ್ರಶ್ನೆಗಳು ಹಾಗೂ ಕಾಗದ ಪತ್ರಗಳನ್ನು ಪೋಟೋ ಕಾಪಿ ಮಾಡಿಕೊಳ್ಳಲು ಅನುವಾಗುವಂತೆ ಸಂಬಂಧಿಸಿದ ಶಾಖೆಗಳಲ್ಲಿರುವ ಪೋಟೋ ಕಾಪಿ ಯಂತ್ರಗಳನ್ನು ಸುಸ್ಥಿತಿಯಲ್ಲಿರಿಸಲು ತಿಳಿಸಿದೆ. ಹಾಗೂ ವಿಧಾನ ಸಭೆ / ಪರಿಷತ್ ಶಾಖೆಯ ಸಿಬ್ಬಂದಿಗಳು ಪೋಟೋ ಕಾಪಿ ಪ್ರತಿಗಳನ್ನು ಕೋರಿದಾಗ ಕಡ್ಡಾಯವಾಗಿ ಅವರಿಗೆ ಅಗತ್ಯ ಸಹಕಾರ ನೀಡುವುದು.
- ಚುಕ್ಕೆ ಗುರುತಿನ ಮತ್ತು ಚುಕ್ಕೆರಹಿತ ಪ್ರಶ್ನೆಗಳಿಗೆ ಹಾಗೂ ಇನ್ನಿತರೆ ಎಲ್ಲಾ ನಿಯಮಗಳ ಗಮನ ಸೆಳೆಯುವ ಸೂಚನಾ ಪ್ರಶ್ನೆಗಳಿಗೆ ಸಂಬಂಧಿಸಿದ ನಿರ್ದೇಶಕರ/ಜಂಟಿ ನಿರ್ದೇಶಕರುಗಳ ಮೂಲಕ ಆಯುಕ್ತರ ಅನುಮೋದನೆಯನ್ನು ಪಡೆದು ಜರೂರಾಗಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

- ಯಾವುದೇ ಪ್ರಶ್ನೆಗಳಿಗೆ / ಸೂಚನೆಗಳಿಗೆ ವಿನಾಕಾರಣ ಕಾಲಾವಕಾಶ ಪಡೆದುಕೊಳ್ಳದಿರಲು ತಿಳಿಸಿದೆ. ತೀರಾ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಕಾಲಾವಕಾಶ ಪಡೆದುಕೊಳ್ಳಬೇಕಾದಲ್ಲಿ ಸಂಬಂಧಿಸಿದ ನಿರ್ದೇಶಕರುಗಳ ಅನುಮೋದನೆಯೊಂದಿಗೆ ಕಾಲಾವಕಾಶ ಪಡೆದುಕೊಳ್ಳಲು ತಿಳಿಸಿದೆ.
- ಹೀಗೆ ಕಾಲಾವಕಾಶ ಪಡೆದುಕೊಂಡ ಪ್ರಶ್ನೆಗಳಿಗೆ ಕಾಲಾವಕಾಶ ಕೋರಿದ ಮಿತಿಯಲ್ಲಿಯೇ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು ಹಾಗೂ ಈ ವಿವರಗಳನ್ನು ಪ್ರತೀ ಶಾಖೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ನಿರ್ವಹಿಸಲು ತಿಳಿಸಿದೆ.
- ವಿಧಾನ ಸಭೆ/ಪರಿಷತ್ ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸಿ, ಮೂರು ದೃಢೀಕೃತ ಶುದ್ದ ಪ್ರತಿಗಳನ್ನು ವಿಧಾನ ಮಂಡಲ ಶಾಖೆಗೆ adpilalccpi@gmail.com ಗೆ soft copy ಯೊಂದಿಗೆ ತ್ವರಿತವಾಗಿ ಕಳುಹಿಸಿಕೊಡಲು ತಿಳಿಸಿದೆ.
- ವಿಧಾನ ಸಭೆ / ಪರಿಷತ್ ಕಾರ್ಯ ಕಲಾಪಗಳು ನಡೆಯುವ ಅವಧಿಯಲ್ಲಿ ಇಲಾಖಾ ಅಧಿಕಾರಿಗಳು ಮತ್ತು ನೌಕರರು ಯಾವುದೇ ರೀತಿಯ ರಜೆಗಳನ್ನು ಪಡೆಯಬಾರದು.
- ವಿಧಾನ ಸಭೆ/ಪರಿಷತ್ ಅಧಿವೇಶನ ನಡೆಯುವ ಸಂದರ್ಭದಲ್ಲಿ ಯಾವುದೇ ಪ್ರವಾಸ/ತಪಾಸಣೆಗೆ ಸಿಬ್ಬಂದಿ ವರ್ಗದವರನ್ನು ಕಳುಹಿಸಬಾರದು. ಅನಿವಾರ್ಯ ಸಂದರ್ಭಗಳಲ್ಲಿ ಆಯುಕ್ತರ ಅನುಮತಿ ಪಡೆದು ನಿಯೋಜಿಸುವುದು.
- ಅಧಿವೇಶನ ಸಮಯದಲ್ಲಿನ ಕಾರ್ಯವಿಧಾನ ಕುರಿತು www.schooleducation.kar.nic.in ಇಲಾಖಾ ಅಂತರ್ಜಾಲ ತಾಣದಲ್ಲಿ ಲಭ್ಯವಿರುವ ಈ ಕಛೇರಿ ಸುತ್ತೋಲೆ ಸಂಖ್ಯೆ ವಿ.ಸ.ಪ 01/ಸುತ್ತೋಲೆ 01/2016-17 ದಿನಾಂಕ 01.02.2017 ರಲ್ಲಿರುವ ಅಂಶಗಳನ್ನು ಪಾಲಿಸಲು ತಿಳಿಸಿದೆ.

**ಮೇಲ್ಕಂಡ ಎಲ್ಲಾ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲು ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದೆ. ಈ ನಿರ್ದೇಶನ ವಿಧಾನ ಸಭೆ/ಪರಿಷತ್ ಅಧಿವೇಶನ ನಡೆಯುವ ಕಾಲದಲ್ಲಿ ಮಾತ್ರ ಅನ್ವಯಿಸುತ್ತದೆ.**

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ:**

01. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
02. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
03. ಅಧೀನ ಕಾರ್ಯದರ್ಶಿಗಳು [ಸಾಮಾನ್ಯ] [ಪ್ರಾಥಮಿಕ] [ಪ್ರೌಢ] [ಯೋಜನೆ] ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
04. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
05. ಅಪರ ಅಯುಕ್ತರು, ಧಾರವಾಡ / ಕಲ್ಬುರ್ಗಿ.
06. ಅಪರ ನಿರ್ದೇಶಕರು(ಆಡಳಿತ) ರವರಿಗೆ.
07. ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ .
08. ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬನಶಂಕರಿ, ಬೆಂಗಳೂರು, ಇವರಿಗೆ .
09. ಸಹನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ/ಶಿಕ್ಷಕರ ಕಲ್ಯಾಣ ನಿಧಿ ಕೆ.ಜಿ ರಸ್ತೆ, ಬೆಂಗಳೂರು ಇವರಿಗೆ
10. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ.
11. ರಾಜ್ಯದ ಎಲ್ಲ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಮತ್ತು ಸಿ.ಟಿ.ಇ., ಪ್ರಾಂಶುಪಾಲರಿಗೆ.
12. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
13. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001.

14. ಆಯುಕ್ತರು / ನಿರ್ದೇಶಕರು / ಜಂಟಿ ನಿರ್ದೇಶಕರು [ಆಡಳಿತ]ಗಳ ಆಪ್ತ ಶಾಖೆಗೆ.
15. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
16. ಆಯುಕ್ತರ ಕಾರ್ಯಾಲಯದ ಎಲ್ಲಾ ಶಾಖಾಧಿಕಾರಿಗಳಿಗೆ/ಅಧೀಕ್ಷಕರಿಗೆ.
17. ಕಛೇರಿ ಪ್ರತಿ.

ಡಾ. ಪಿ.ಸಿ. ಜಾಫರ್, ಭಾ.ಆ.ಸೇ.,
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

Dr. P.C. JAFFER, I.A.S.,
Commissioner
Department of Public Instruction

"ಅಧಿವೇಶನದ ತುರ್ತು"

ಅ.ಸ.ಪ.ವಿ.ಸ.ಪ01/ ವಿ.ಮಂ.ಅ:03: 2016-17.

ದಿನಾಂಕ:01ನೇ ಫೆಬ್ರವರಿ 2018

***ಮಾನ್ಯರೇ,***

**ವಿಷಯ**: ದಿನಾಂಕ:05.02.2018 ರಿಂದ ದಿನಾಂಕ:28.02.2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರ ಕಳುಹಿಸುವ ಬಗ್ಗೆ.

**ಉಲ್ಲೇಖ**: ವಿಧಾನ ಸಭೆ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕವಿಸಸ/880/ಶಾರಶಾ/2013-18 ದಿನಾಂಕ:24.01.2018.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅಧಿಸೂಚನೆಯಂತೆ ವಿಧಾನ ಮಂಡಲ ಅಧಿವೇಶನ ದಿನಾಂಕ:05.02.2018 ರಿಂದ ದಿನಾಂಕ:28.02.2018 ರವರೆಗೆ ಬೆಂಗಳೂರಿನಲ್ಲಿ ಜರುಗಲಿದೆ. ಈ ಹಿನ್ನಲೆಯಲ್ಲಿ ಅಧಿವೇಶನದ ಸಮಯದಲ್ಲಿ ಪ್ರಸ್ತಾಪಿತವಾಗುವ ಎಲ್ಲಾ ಪ್ರಶ್ನೆಗಳು ಹಾಗೂ ಗಮನ ಸೆಳೆಯುವ ಸೂಚನೆಗಳಿಗೆ ಸಕಾಲದಲ್ಲಿ ಉತ್ತರವನ್ನು ನೀಡಬೇಕಾಗಿದ್ದು, ಜಿಲ್ಲೆಗಳಿಂದ ಮಾಹಿತಿಯನ್ನು ತ್ವರಿತವಾಗಿ ಪಡೆಯಬೇಕಾಗಿರುತ್ತದೆ.

ಅಧಿವೇಶನದ ಸಮಯದಲ್ಲಿ ಸಂಬಂಧಿಸಿದ ಉಪನಿರ್ದೇಶಕರುಗಳು ಕಛೇರಿಯಲ್ಲಿದ್ದು, ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ ಹಾಗೂ ಗಮನಸೆಳೆಯುವ ಸೂಚನೆಗಳಿಗೆ ಆಧ್ಯ ಗಮನಹರಿಸಿ ಅತೀ ಜರೂರಾಗಿ ಉತ್ತರ ಸಲ್ಲಿಸಲು ಕ್ರಮ ವಹಿಸಬೇಕಾಗಿ ಸೂಚಿಸಿದೆ. ಮುಂದುವರೆದು ಉಪನಿರ್ದೇಶಕರುಗಳು ಮತ್ತು ವಿಧಾನ ಸಭಾಂಗಣದ ಕೇಂದ್ರಸ್ಥಾನ ಬಿಡಬಾರದೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

[signature]

***ಇವರಿಗೆ:***
ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ / ಅಭಿವೃದ್ಧಿ]
ಸಾರ್ವಜನಿಕ ಶಿಕ್ಷಣ ಇಲಾಖೆ,

New Public Offices Building, Nrupathunga Road, Bengaluru - 560 001
ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು - 560 001
Ph. No. 080-22214350, Fax : 080-22212137, e-mail : cpi.edu.sgkar@kar.nic.in, ps2cpi@gmail.com

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ವಿ.ಸ.ಪ 01/ವಿ.ಮಂ.ಅ 03/2016-17 ದಿನಾಂಕ: 01-02-2018.

**: ಜ್ಞಾಪನ :**

**ವಿಷಯ:** ದಿನಾಂಕ: 05.02.2018 ರಿಂದ 28.02.2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದ ಸಮಯದಲ್ಲಿ ಇಲಾಖೆಯ ಪರವಾಗಿ ಕಾರ್ಯಕಲಾಪಗಳಲ್ಲಿ ಹಾಜರಾಗುವ ಕುರಿತು

**ಉಲ್ಲೇಖ:** ವಿಧಾನ ಸಭೆ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕವಿಸಸ/880/ಶಾರಶಾ/2013-18 ದಿನಾಂಕ: 24.01.2018.

* * * * * *

ಉಲ್ಲೇಖಿತ ಅಧಿಸೂಚನೆಯಂತೆ ದಿನಾಂಕ: 05.02.2018 ರಿಂದ ಪ್ರಾರಂಭವಾಗಿ 28.02.2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದ ಸಮಯದಲ್ಲಿ ಇಲಾಖೆಗೆ ಸಂಬಂಧಸಿದಂತೆ ಪ್ರತಿ ದಿನ ಚರ್ಚಿತವಾಗುವ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು ಮತ್ತು ವಿವಿಧ ನಿಯಮಗಳಡಿಯಲ್ಲಿ ಸದನಗಳಲ್ಲಿ ಚರ್ಚೆಯಾಗುವ ವಿಷಯಗಳಿಗೆ ಸಕಾಲದಲ್ಲಿ ಸರ್ಕಾರಕ್ಕೆ/ಸಚಿವರಿಗೆ ಉತ್ತರಗಳನ್ನು/ಮಾಹಿತಿಗಳನ್ನು ನೀಡಬೇಕಾಗಿರುತ್ತದೆ. ಪ್ರಯುಕ್ತ ಅಧಿವೇಶನಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ನಿರ್ವಹಿಸಲು ಇಲಾಖೆಯ ಕೆಳಕಂಡ ಹಿರಿಯ ಅಧಿಕಾರಿಗಳನ್ನು ಅವರ ಹೆಸರುಗಳ ಮುಂದೆ ಸೂಚಿಸಿರುವ ದಿನಾಂಕಗಳಂದು ಸದನಗಳಲ್ಲಿ ಹಾಜರಿದ್ದು, ಇಲಾಖೆಗೆ ಸಂಬಂಧಿಸಿದಂತೆ ಚರ್ಚಿತವಾಗುವ ಎಲ್ಲಾ ವಿಷಯಗಳ ಬಗ್ಗೆ ಸಕಾಲದಲ್ಲಿ ಉತ್ತರಗಳನ್ನು/ಮಾಹಿತಿಗಳನ್ನು ಒದಗಿಸಲು ಅನುವಾಗುವಂತೆ ಇಲಾಖೆಯ ಪರವಾಗಿ ನೋಡಲ್ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಲು ಸೂಚಿಸಿದೆ.

| ಕ್ರ ಸಂ | ಅಧಿಕಾರಿಗಳ ಹೆಸರು ಮತ್ತು ಪದನಾಮ | ವಿಧಾನಸಭೆಗೆ ನಿಯೋಜಿಸಿರುವ ದಿನಾಂಕ | ವಿಧಾನ ಪರಿಷತ್ತಿಗೆ ನಿಯೋಜಿಸಿರುವ ದಿನಾಂಕ |
|---|---|---|---|
| 1 | ಶ್ರೀಮತಿ ಜೋಹರಾ ಜಬೀನ್ ಎಂ<br>ನಿರ್ದೇಶಕರು, ಮೈನಾರಿಟಿ, ಬೆಂಗಳೂರು | 05-02-2018 (ಜಂಟಿ ಅಧಿವೇಶನ) | |
| 2 | ಶ್ರೀ ಹೆಚ್.ಎನ್ ಗೋಪಾಲ ಕೃಷ್ಣ<br>ನಿರ್ದೇಶಕರು,ಡಿ.ಎಸ್.ಇ.ಆರ್.ಟಿ. ಬೆಂಗಳೂರು | 06-02-2018 | |
| 3 | ಶ್ರೀ ನಾಗೇಂದ್ರ ಮಧ್ಯಸ್ಥ<br>ನಿರ್ದೇಶಕರು, ರಾ.ಮಾ.ಶಿ.ಅ | | 06-02-2018 |
| 4 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | 07-02-2018 | |
| 05 | ಶ್ರೀಮತಿ ಫಿಲೋಮಿನಾ ಲೋಬೋ<br>ನಿರ್ದೇಶಕರು, (ಪ್ರೌಢ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 07-02-2018 |
| 06 | ಶ್ರೀನರಸಿಂಹಯ್ಯ, ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂ.<br>ಬೆಂಗಳೂರು | 08-02-2018 | |

| | | | |
|---|---|---|---|
| 07 | ಶ್ರೀ ನಾಗೇಂದ್ರ ಮಧ್ಯಸ್ಥ<br>ನಿರ್ದೇಶಕರು, ರಾ.ಮಾ.ಶಿ.ಅ | | 08-02-2018 |
| 08 | ಶ್ರೀಮತಿ ಫಿಲೋಮಿನಾ ಲೋಬೋ<br>ನಿರ್ದೇಶಕರು, (ಪ್ರೌಢ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | 09-02-2018 | |
| 09 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 09-02-2018 |
| 10 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | 16-02-2018<br>(ಆಯವ್ಯಯ ಮಂಡನೆ) | |
| 11 | ಶ್ರೀಮತಿ ಫಿಲೋಮಿನಾ ಲೋಬೋ<br>ನಿರ್ದೇಶಕರು, (ಪ್ರೌಢ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 16-02-2018<br>(ಆಯವ್ಯಯ ಮಂಡನೆ) |
| 12 | ಶ್ರೀಮತಿ ಜೋಹರಾ ಜಬೀನ್ ಎಂ<br>ನಿರ್ದೇಶಕರು, ಮೈನಾರಿಟಿ, ಬೆಂಗಳೂರು | 19-02-2018 | |
| 13 | ಶ್ರೀಕೆಂಚೇಗೌಡ ಎನ್<br>ಸಹನಿರ್ದೇಶಕರು[ಪ್ರಭಾರಿ] ಡಿ.ಎಸ್.ಇ.ಆರ್.ಟಿ, | | 19-02-2018 |
| 14 | ಶ್ರೀ ಹೆಚ್.ಆರ್ ಮಾರುತಿ,<br>ಸಹ ನಿರ್ದೇಶಕರು(ಪ್ರಭಾರಿ),<br>ಮ.ಉ.ಯೋ. ಕೆ.ಜಿ ರಸ್ತೆ,ಬೆಂಗಳೂರು | 20-02-2018 | |
| 15 | ಶ್ರೀ ದಶರಥ ಮಲ್ಲೇಶ ದಾನೋಜಿ<br>ಕಾರ್ಯದರ್ಶಿಗಳು, ಕ.ಪ್ರಾ.ಶಿ.ಪ.ಮಂ. ಮಲ್ಲೇಶ್ವರಂ, ಬೆಂಗಳೂರು | | 20-02-2018 |
| 16 | ಶ್ರೀಮತಿ ಫಿಲೋಮಿನಾ ಲೋಬೋ<br>ನಿರ್ದೇಶಕರು, (ಪ್ರೌಢ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | 21-02-2018 | |
| 17 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 21-02-2018 |
| 18 | ಶ್ರೀ ಎಸ್ ಜಯಕುಮಾರ್ ನಿರ್ದೇಶಕರು<br>ಆರ್.ಐ.ಇ ಬೆಂಗಳೂರು | 22-02-2018 | |
| 19 | ಶ್ರೀನರಸಿಂಹಯ್ಯ, ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂ.<br>ಬೆಂಗಳೂರು | | 22-02-2018 |
| 20 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | 23-02-2018 | |

| | | | |
|---|---|---|---|
| 21 | ಶ್ರೀಮತಿ ಫಿಲೋಮಿನಾ ಲೋಬೋ<br>ನಿರ್ದೇಶಕರು, (ಪ್ರೌಢ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 23-02-2018 |
| 22 | ಶ್ರೀ ನಾಗೇಂದ್ರ ಮಧ್ಯಸ್ಥ<br>ನಿರ್ದೇಶಕರು, ರಾ.ಮಾ.ಶಿ.ಅ, | 26-02-2018 | |
| 23 | ಶ್ರೀ ಹೆಚ್.ಎನ್ ಗೋಪಾಲ ಕೃಷ್ಣ<br>ನಿರ್ದೇಶಕರು,ಡಿ.ಎಸ್.ಇ.ಆರ್.ಟಿ. ಬೆಂಗಳೂರು | | 26-02-2018 |
| 24 | ಶ್ರೀನರಸಿಂಹಯ್ಯ, ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂ.<br>ಬೆಂಗಳೂರು | 27-02-2018 | |
| 25 | ಶ್ರೀ ಹೆಚ್.ಆರ್ ಮಾರುತಿ,<br>ಸಹನಿರ್ದೇಶಕರು(ಪ್ರಭಾರಿ), ಮ.ಉ.ಯೋ. ಕೆ.ಜಿ ರಸ್ತೆ,ಬೆಂಗಳೂರು | | 27-02-2018 |
| 26 | ಶ್ರೀ ನಾಗೇಂದ್ರ ಮಧ್ಯಸ್ಥ<br>ನಿರ್ದೇಶಕರು, ರಾ.ಮಾ.ಶಿ.ಅ | 28-02-2018 | |
| 27 | ಶ್ರೀ ಬಿ.ಕೆ ಬಸವರಾಜ ನಿರ್ದೇಶಕರು<br>(ಪ್ರಾಥಮಿಕ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು | | 28-02-2018 |

- *ಸಂಬಂಧಪಟ್ಟ ಅಧಿಕಾರಿಗಳು ನಿಯೋಜಿಸಿರುವ ದಿನಾಂಕಗಳಂದು ಸದನ ಪ್ರಾರಂಭವಾಗುವುದಕ್ಕೆ 30 ನಿಮಿಷ ಮುಂಚಿತವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಕಛೇರಿಯಲ್ಲಿ ವರದಿ ಮಾಡಿಕೊಂಡು ನಂತರ ಸದನದಲ್ಲಿ ಕಡ್ಡಾಯವಾಗಿ ಹಾಜರಿರುವುದು.*

- *ಸದನದ ಕಾರ್ಯಕಲಾಪದ ವೇಳೆಯಲ್ಲಿ, ಪ್ರಶ್ನೋತ್ತರ ಅವಧಿಯಲ್ಲಿ ಇಲಾಖೆಗೆ ಸಂಬಂಧಿಸಿದ ವಿಷಯಗಳ ಪ್ರಸ್ತಾಪ ಆದಲ್ಲಿ ಮತ್ತು ಸಚಿವರ ಭರವಸೆಗಳ ಬಗ್ಗೆ ಪ್ರಸ್ತಾಪ ಆದಲ್ಲಿ ಆ ವಿಚಾರಗಳನ್ನು ಆಯುಕ್ತರಿಗೆ ಹಾಗೂ ಸಂಬಂಧಿಸಿದ ನಿರ್ದೇಶಕರುಗಳಿಗೆ ದೂರವಾಣಿ ಮೂಲಕ ಗಮನಕ್ಕೆ ತರಲು ತಿಳಿಸಿದೆ.*

- *ಸದನದ ಚರ್ಚೆಯ ದಿಕ್ಕನ್ನು ಗಮನಿಸಿ, ಆಯುಕ್ತರ ಹಾಗೂ ಸಂಬಂಧಪಟ್ಟ ನಿರ್ದೇಶಕರ ಉಪಸ್ಥಿತಿಯ ಅಗತ್ಯವಿದ್ದರೆ ಕೂಡಲೇ ಅವರಿಗೆ ಹಾಜರಾಗಲು ದೂರವಾಣಿ ಮೂಲಕ ಮಾಹಿತಿಯನ್ನು ನೀಡುವುದು.*

- *ಇಲಾಖೆಯ ಪ್ರಶ್ನೋತ್ತರ ಅವಧಿ ಹೊರತುಪಡಿಸಿ ಇತರೆ ಎಲ್ಲಾ ಅವಧಿಯಲ್ಲಿ [ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ ಪ್ರಸ್ತಾಪ ಹಾಗೂ ಇನ್ನಿತರೆ ನಿಯಮಗಳಡಿಯಲ್ಲಿ ಪ್ರಸ್ತಾಪ] ಸದನದಲ್ಲಿ ಪ್ರಸ್ತಾಪವಾಗುವ ಇಲಾಖೆಯ ಅಂಶಗಳನ್ನು ಕೂಡಲೇ ಈ ಕಛೇರಿಗೆ ವರದಿ ಮಾಡುವುದು.*

- *ದಿನದ ಅಂತ್ಯದಲ್ಲಿ ಸದನದಲ್ಲಿ ಚರ್ಚಿಸಲಾಗುವ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ವಿವರಗಳನ್ನು ಕ್ರೋಢೀಕರಿಸಿಕೊಂಡು ಒಂದು ಲಿಖಿತ ವರದಿಯನ್ನು ಸಿದ್ಧಪಡಿಸಿಕೊಂಡು ಮರು ದಿವಸವೇ ಆಯುಕ್ತರಿಗೆ ಹಾಗೂ ನಿರ್ದೇಶಕರುಗಳಿಗೆ ಸಲ್ಲಿಸಲು ತಿಳಿಸಿದೆ.*

❖ ದಿನದ ಅಂತ್ಯದಲ್ಲಿ ಸದನದಲ್ಲಿ ಚರ್ಚಿಸಲಾಗುವ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ವಿವರಗಳನ್ನು ಕ್ರೋಢೀಕರಿಸಿಕೊಂಡು ಒಂದು ಲಿಖಿತ ವರದಿಯನ್ನು ಸಿದ್ಧಪಡಿಸಿಕೊಂಡು ಮರು ದಿವಸವೇ ಆಯುಕ್ತರಿಗೆ ಹಾಗೂ ನಿರ್ದೇಶಕರುಗಳಿಗೆ ಸಲ್ಲಿಸಲು ತಿಳಿಸಿದೆ.

❖ ಅಧಿವೇಶನದ ಅವಧಿ ವಿಸ್ತರಣೆಯಾದಲ್ಲಿ ಸಂಬಂಧಿಸಿದ ಅದಿಕಾರಿಗಳು ಅಧಿವೇಶನ ಮುಗಿಯುವವರೆಗೂ ಕರ್ತವ್ಯನಿರ್ವಹಿಸತಕ್ಕದ್ದು.

[ಡಾ॥ಪಿ.ಸಿ.ಜಾಫರ್]
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಬೆಂಗಳೂರು.**

ಪ್ರತಿಯನ್ನು ಮಾಹಿತಿಗಾಗಿ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ & ಪ್ರೌಢ ಶಿಕ್ಷಣ)ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಗೌರವ ಪೂರ್ವಕವಾಗಿ ಸಲ್ಲಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
3. ರಾಜ್ಯ ಯೋಜನಾ ನಿರ್ದೇಶಕರು,ಸ.ಶಿ.ಅ & ರಾ.ಮಾ.ಶಿ.ಅ
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಜಿಲ್ಲೆ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಜಿಲ್ಲೆ.
6. ಜಂಟಿ ನಿರ್ದೇಶಕರು [ಆಡಳಿತ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ [ರಿ], ಬೆಂಗಳೂರು.
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
10. ಸಹ ನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಕೆಂಪೇಗೌಡ ರಸ್ತೆ, ಬೆಂಗಳೂರು.
11. ಸಹನಿರ್ದೇಶಕರು [ಶಾಲಾ ಶಿಕ್ಷಣ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
12. ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
13. ಸಂಬಂಧಿಸಿದ ಅಧಿಕಾರಿಗಳು ಹಾಗೂ ನೌಕರರುಗಳಿಗೆ.
14. ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ.